ದಿನಾಂಕಃ 19.02.2026

ಪಿ. ಆಂಡ್ ಎಸ್.ಸಿಃ 1/2025

ಪಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ

ನಾನು ಪಿ.ಯು.ಸಿವರೆಗೆ ಓದಿರುತ್ತೇನೆ. ದೇವರಾಜು ಮತ್ತು ಶೋಭರವರಿಗೆ ನೀವು ಎಷ್ಟನೇ ಮಗಳು ಎಂದರೆ ಸಾಕ್ಷಿ ನಾನು ಅವರಿಗೆ ಮೊದಲನೇಯ ಮಗಳು ಆದರೆ ನಾನು ಚಿಕ್ಕವಳಾಗಿದ್ದಾಗಿನಿಂದ ಟಿ.ಸಿ.ಭಾಗ್ಯಲಕ್ಷ್ಮಿ ಮತ್ತು ದೇವೇಗೌಡರವರು ಸಾಕಿರುತ್ತಾರೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ದೇವರಾಜುರವರು ಯಾವಾಗ ತೀರಿಕೊಂಡರು ಎಂದರೆ ಸಾಕ್ಷಿ ಅವರ ಬಗ್ಗೆ ನನಗೆ ಅಷ್ಟಾಗಿ ಗೊತ್ತಿಲ್ಲ ನಾನು ಚಿಕ್ಕವಳಾಗಿದ್ದಾಗ ದೇವೇಗೌಡರವರು ನನ್ನನ್ನು ತಮ್ಮ ಜೊತೆ ಹಾಸನಕ್ಕೆ ಕರೆದುಕೊಂಡು ಹೋಗಿ ಸಾಕಿದರು ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಒಂದು ಕ್ರಯ ಪತ್ರದ ನಕಲನ್ನು ತೋರಿಸಿ ಅದರ ಪುಟ ಸಂಖ್ಯೆ 4 ರಲ್ಲಿ ಇರುವ ಪೋಟೋ ಹಾಗೂ ಸಹಿ ತೋರಿಸಿ ಸದರಿ ಪೋಟೋದಲ್ಲಿ ಇರುವವರು ನೀವೇ ಮತ್ತು ಸಹಿ ನಿಮ್ಮದೇ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಆ ಪೋಟೋವನ್ನು ನೋಡಿ ಮತ್ತು ಸಹಿಯನ್ನು ನೋಡಿ ಹೌದು ಎಂದು ಉತ್ತರಿಸುತ್ತಾರೆ. ಹಾಗಾಗಿ ಸದರಿ ದಾಖಲಾತಿಯನ್ನು ಕೇವಲ ಗುರುತಿಸುವ ಸಲುವಾಗಿ ನಿಆರ್.1 ಎಂದು, ಸಾಕ್ಷಿಯ ಸಹಿಯನ್ನು ನಿಆರ್.1(ಎ) ಗುರುತಿಸಲಾಯಿತು. ನಿಆರ್.-1 ರಲ್ಲಿ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಸಿ.ಎ.ಕೆರೆ ಹೋಬಳಿ, ಚಿಕ್ಕರಸಿನಕೆರೆ ದಾಖ್ಲೆ ಗುರುದೇವರಹಳ್ಳಿ ಯಲ್ಲಿ ವಾಸವಾಗಿರುವ ಲೇಟ್ ದೇವರಾಜುರವರ ಮಗಳು ಅಭಿಲಾಷಾ.ಜಿ.ಡಿ ಆದಾ ನಾನು ಎಂದು ಬರೆದಿರುವುದು ನೀವೇ ಎಂದರೆ ಸಾಕ್ಷಿ ಅದು ನಾನೇ ಆದರೆ ನನ್ನ ತಂದೆ ತಾಯಿ ನಡುವೆ ಸಿವಿಲ್ ನ್ಯಾಯಾಲಯದಲ್ಲಿ ಆಸ್ತಿಗೋಸ್ಕರ ಕೇಸು ಹಾಕಿಕೊಂಡಿದ್ದರು ಆ ಕೇಸಿನಲ್ಲಿ ನನ್ನನ್ನು ಪಾರ್ಟಿ ಮಾಡಿದ್ದರು, ಹಾಗಾಗಿ ಸ್ವಂತ ತಂದೆ ತಾಯಿ ಹೆಸರನ್ನು ತೋರಿಸಿ ಕೇಸನ್ನು ರಾಜಿ ಮಾಡಿಕೊಂಡಿದ್ದರು ಅದ್ದರಿಂದ ಕೇಸಿನಲ್ಲಿ ಸ್ವಂತ ತಂದೆ ತಾಯಿ ಹೆಸರು ಇರುವುದರಿಂದ ಅದೇ ರೀತಿ ಕ್ರಯ ಪತ್ರದಲ್ಲಿ ತೋರಿಸಬೇಕೆಂದು ಹೇಳಿ ಆ ರೀತಿ ನಮೂದು ಮಾಡಲಾಗಿದೆ ಎಂದು ಉತ್ತರಿಸುತ್ತಾರೆ. ನೀವು ಈ ಮೇಲಿನ ರೀತಿ ಸೃಷ್ಟಿಸಿ ಕೊಂಡು ಹೇಳುತ್ತಿದ್ದೀರಿ ಅದು ಸುಳ್ಳು ಎಂದರೆ ಸಾಕ್ಷಿ ಇಲ್ಲ, ದಾಖಲಾತಿಗಳು ಇವೆ ಎಂದು ಉತ್ತರಿಸುತ್ತಾರೆ. ನಿಆರ್.1 ರಲ್ಲಿ ನಮೂದಿರುವ ಭಾಗ್ಯಲಕ್ಷ್ಮಿ ಟಿ.ಸಿ ರವರು ಈ

ಪ್ರಕರಣದ 1ನೇ ಎದುರುದಾರರಾದ ಲಕ್ಷ್ಮಿದೇವಮ್ಮನವರ ಮಗಳು ಎಂದರೆ ಸರಿ. ನಿಆರ್1 ಕ್ರಯ ಪತ್ರವನ್ನು ಭಾಗ್ಯಲಕ್ಷ್ಮಿ ಟಿ.ಸಿ ರವರಿಗೆ ಬರೆದುಕೊಟ್ಟಿರುವುದು ನೀವೇ ಎಂದರೆ ಸಾಕ್ಷಿ ಹೌದು ನಾನೇ ಬರೆದುಕೊಟ್ಟಿರುವುದು ಎಂದು ಉತ್ತರಿಸುತ್ತಾರೆ. ಭಾಗ್ಯಲಕ್ಷ್ಮಿ ಟಿ.ಸಿ ಯವರು ದಿ.13.09.2017ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿ. ಈಗ ತೋರಿಸಿದ ದಾಖಲಾತಿ ಅವರ ಮರಣ ಪ್ರಮಾಣ ಪತ್ರ ಎಂದರೆ ಸರಿ. ಸದರಿ ದಾಖಲಾತಿಯನ್ನು ಸಾಕ್ಷಿ ಒಪ್ಪಿರುವ ಕಾರಣ ನಿಆರ್2 ಎಂದು ಗುರುತಿಸಲಾಯಿತು. ನಿಆರ್2ರಲ್ಲಿ ಭಾಗ್ಯಲಕ್ಷ್ಮಿ ಟಿ.ಸಿ ರವರ ತಾಯಿ ಲಕ್ಷ್ಮಿದೇವಮ್ಮ ಮತ್ತು ತಂದೆ ಚಿಕ್ಕತಿಮ್ಮೇಗೌಡ ಎಂದು ನಮೂದಾಗಿದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಭಾಗ್ಯಲಕ್ಷ್ಮಿ ಟಿ.ಸಿರವರ ಗಂಡ ಕೆ.ದೇವೇಗೌಡರವರು ಮೃತರಾಗಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಅವರ ತಂದೆ ಚಿಕ್ಕತಿಮ್ಮೇಗೌಡ ಸಹ ಮೃತರಾಗಿದ್ದಾರೆ ಎಂದರೆ ಸರಿ. ಭಾಗ್ಯಲಕ್ಷ್ಮಿ ಟಿ.ಸಿರವರಿಗೆ ವಾರಸುದಾರರಾಗಿ ಅವರ ತಾಯಿ ಲಕ್ಷ್ಮಿದೇವಮ್ಮ ಒಬ್ಬರೇ ಬದುಕಿರುವುದು ಎಂದರೆ ಸಾಕ್ಷಿ ಅವರ ಮಗಳಾಗಿ ನಾನೂ ಬದುಕಿದ್ದೇನೆ ಎಂದು ಉತ್ತರಿಸುತ್ತಾರೆ. ನೀವು ಭಾಗ್ಯಲಕ್ಷ್ಮಿ ಟಿ.ಸಿ ಹಾಗು ಕೆ.ದೇವೇಗೌಡರ ಮಗಳಲ್ಲ ಎಂದರೆ ಸಾಕ್ಷಿ ನಾನು ಚಿಕ್ಕಂದಿನಿಂದಲೂ ಅವರ ಜೊತೆಯಲ್ಲಿಯೇ ಇದ್ದಿದ್ದು ಎಂದು ಉತ್ತರಿಸುತ್ತಾರೆ. ನೀವು ಭಾಗ್ಯಲಕ್ಷ್ಮಿ ಟಿ.ಸಿ ಹಾಗು ಕೆ.ದೇವೇಗೌಡರ ಮಗಳಲ್ಲ, ಶೋಭ ಮತ್ತು ದೇವರಾಜು ರವರ ಮಗಳು ಎಂದರೆ ಸಾಕ್ಷಿ ದೇವೇಗೌಡರವರಿಗೆ ಕಿಡ್ನಿ ಸಮಸ್ಯೆ ಉಂಟಾಗಿತ್ತು ಆಗ ನನ್ನನ್ನು ಊರಿಗೆ ತಂದು ಬಿಟ್ಟಿದ್ದರು, ಆಗಲೇ ನನಗೆ ಶೋಭ ಮತ್ತು ದೇವರಾಜು ರವರು ನನ್ನ ಅಪ್ಪ ಅಮ್ಮ ಎಂದು ಗೊತ್ತಾಗಿದ್ದು ಅಲ್ಲಿಯ ವರೆಗು ನನಗೆ ಗೊತ್ತಿರಲಿಲ್ಲ, ನನ್ನ ಮದುವೆಯನ್ನು ಭಾಗ್ಯಲಕ್ಷ್ಮಿ ಟಿ.ಸಿರವರು ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ನನ್ನ ಗಂಡನ ಹೆಸರು ಚಂದನ.ಕೆ.ಎಸ್. ಅರ್ಜಿಯಲ್ಲಿ ನೀವು ನಿಮ್ಮ ಗಂಡನ ಹೆಸರನ್ನು ಕಾಣಿಸಿಲ್ಲ ಎಂದರೆ ಸಾಕ್ಷಿ ಮಿಸ್ ಆಗಿ ಬಿಟ್ಹೋಗೀದೆ ಎಂದು ಉತ್ತರಿಸುತ್ತಾರೆ. ಮಿಸ್ ಆಗಿ ಬಿಟ್ಟುಹೋಗಿಲ್ಲ ನೀವು ಬೇಕಂತಲೆ ಲೇಟ್ ದೇವೇಗೌಡರ ಮಗಳು ಎಂದು ಸುಳ್ಳು ನಮೂದಿಸಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನೀವು ಮದ್ದೂರು ತಾಲ್ಲೂಕು ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು 12 ವರ್ಷಗಳ ಹಿಂದೆ ಮಾಡುತ್ತಿದ್ದೆ ಎಂದು ಉತ್ತರಿಸುತ್ತಾರೆ. ನೀವು ದಿ.25.03.2014ರಲ್ಲಿ ಮದ್ದೂರು ತಾಲ್ಲೂಕು ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಿರೀ ಎಂದರೆ ಸಾಕ್ಷಿ ಅಲ್ಲಿ ಮಾಡುತ್ತಿರಲಿಲ್ಲ, ಸಿ.ಎ.ಕೆರೆ ನಾಡಕಛೇರಿಯಲ್ಲಿ ಮಾಡುತ್ತಿದ್ದೆ ಎಂದು ಉತ್ತರಿಸುತ್ತಾರೆ. ನೀವು ನಿಆರ್ 1ರಲ್ಲಿ ಇರುವ ಸ್ವತ್ತನ್ನು ರೂ.80 ಸಾವಿರಗಳಿಗೆ ನಾನು

ದಿ.25.03.2014 ರಂದು ಭಾಗ್ಯಲಕ್ಷ್ಮಿ ಟಿ.ಸಿ ರವರಿಗೆ ಮಾರಾಟ ಮಾಡಿದ್ದೀರಿ ಎಂದರೆ ಸಾಕ್ಷಿ ಸಿವಿಲ್ ದಾವೆಯಲ್ಲಿ ಆ ರೀತಿ ಇದ್ದುದ್ದರಿಂದ ಆ ರೀತಿ ಮಾರಾಟ ಮಾಡಿದ್ದೇನೆ ನಾನು ಅವರಿಂದ ಹಣ ಪಡೆದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ನೀವು ಮೇಲಿನ ರೀತಿ ಸುಳ್ಳು ಹೇಳುತ್ತಿದ್ದೀರಿ, ನಿಆರ್.1 ರ ಪ್ರಕಾರ ರೂ.80 ಸಾವಿಗಳನ್ನು ಪಡೆದುಕೊಂಡು ಕ್ರಯ ಪತ್ರ ಮಾಡಿಕೊಟ್ಟಿದ್ದೀರಿ ಎಂದರೆ ಸಾಕ್ಷಿ ಸುಳ್ಳು ನನ್ನ ಬಳಿ ದಾಖಲಾತಿ ಇದೆ ಎಂದು ಉತ್ತರಿಸುತ್ತಾರೆ. ನಿಆರ್ 1 ರ ರೀತಿ ನೀವು ಭಾಗ್ಯಲಕ್ಷ್ಮಿ ಟಿ.ಸಿ ರವರಿಗೆ ಕ್ರಯ ಪತ್ರ ಮಾಡಿಕೊಟ್ಟ ನಂತರ ಅವರ ಹೆಸರಿಗೆ ಖಾತ ಆಗಿ ಆರ್.ಟಿ.ಸಿ ಬಂದಿದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಇಲ್ಲ ನಾನೇ ಇದ್ದೇನೆ ಎಂದು ಉತ್ತರಿಸುತ್ತಾರೆ. ಭಾಗ್ಯಲಕ್ಷ್ಮಿ ಟಿ.ಸಿ ರವರು ಸದರಿ ಸ್ವತ್ತಿನ ಮಾಲೀಕರಾಗಿ ಸ್ವಾಧೀನಾನುಭವದಲ್ಲಿ ಇದ್ದರೂ ಸಹ ನೀವು ನಾನು ಸ್ವಾಧೀನದಲ್ಲಿ ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕಿ ಇಲ್ಲ, ಅವರು ಬದುಕಿದ್ದಾಗಲೂ ನಾನೇ ಸ್ವಾಧೀನದಲ್ಲಿ ಇದ್ದು ಮಾಡಿಸುತ್ತಿದ್ದೆ, ಈಗಲೂ ನಾನೇ ಸ್ವಾಧೀನದಲ್ಲಿ ಇದ್ದೇನೆ ಎಂದು ಉತ್ತರಿಸುತ್ತಾರೆ. ಮೇಲಿನ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ನಾಡಕಛೇರಿಯಲ್ಲಿ ಕೆಲಸ ಮಾಡುವುದರಿಂದ ರೆವೆನ್ಯೂ ದಾಖಲಾತಿಗಳ ಖಾತ ವರ್ಗಾವಣೆಗಳ ಬಗ್ಗೆ ನಿಮಗೆ ಮಾಹಿತಿ ಇದೆ ಎಂದರೆ ಸಾಕ್ಷಿ ನಾನು ಆ ಕೆಲಸ ಮಾಡುತ್ತಿರಲಿಲ್ಲ ಹಾಗಾಗಿ ನನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮಗೆ ಖಾತ ವರ್ಗಾವಣೆಗಳ ಬಗ್ಗೆ ಮಾಹಿತಿ ಇರುವುದರಿಂದ ಮತ್ತು ನಾಡ ಕಛೇರಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ಭಾಗ್ಯಲಕ್ಷ್ಮಿ ಟಿ.ಸಿ ರವರು ತೀರಿಕೊಂಡ ಬಳಿಕ ನೀವೇ ಅವರಿಗೆ ಮಾರಾಟ ಮಾಡಿದ್ದ ಸ್ವತ್ತಿನ ಖಾತೆಯನ್ನು 1 ನೇ ಎದುರುದಾರರಾದ ಲಕ್ಷ್ಮಿದೇವಮ್ಮನಿಗೆ ತಿಳಿಯದ ಹಾಗೆ ನಿಮ್ಮ ಹೆಸರಿಗೆ ಬದಲಾವಣೆ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ ಅವರು ನನ್ನ ತಾಯಿಯಾಗಿದ್ದರಿಂದ ಅವರು ತೀರಿಕೊಂಡ ಬಳಿಕ ಪೌತಿ ಖಾತೆ ಮಾಡಿಸಿಕೊಂಡಿದ್ದೇವೆ ಎಂದು ಉತ್ತರಿಸುತ್ತಾರೆ. ಎಂ.ಆರ್.ಹೆಚ್.52/2017-18 ರಂತೆ ನಿಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿ ಹೌದು ಪೌತಿ ಖಾತೆ ಮಾಡಿಸಿಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ನೀವು ಭಾಗ್ಯಲಕ್ಷ್ಮಿ.ಟಿ.ಸಿ ಮತ್ತು ಕೆ.ದೇವೇಗೌಡರವರ ಮಗಳಲ್ಲದೇ ಇದ್ದರು ಸುಳ್ಳು ದಾಖಲಾತಿಗಳನ್ನು ಕೊಟ್ಟು ನಿಮ್ಮ ಹೆಸರಿಗೆ ಖಾತಾ ವರ್ಗಾವಣೆ ಮಾಡಿಕೊಂಡ ವಿಚಾರ 1 ನೇ ಎದುರುದಾರಾದ ಲಕ್ಷ್ಮಿದೇವಮ್ಮನವರಿಗೆ ತಿಳಿದು ಬಂದ ನಂತರ ಸದರಿಯವರು ಖಾತ ಆದೇಶವನ್ನು ಪ್ರಶ್ನಿಸಿ ಮಂಡ್ಯ ಉಪವಿಭಾಗಾಧಿಕಾರಗಳ ನ್ಯಾಯಾಲಯದಲ್ಲಿ

ಅಪೀಲು ಸಂಖ್ಯೆ 465/2018 ರಂತೆ ಅಪೀಲು ಸಲ್ಲಿಸಿದ್ದಾರೆ, ಅದರಲ್ಲಿ ನಿಮ್ಮನ್ನೂ ಸಹ 4 ನೇ ಎದುರುದಾರರಾಗಿ ಪಾರ್ಟಿ ಮಾಡಿದ್ದಾರೆ ಎಂದರೆ ಸಾಕ್ಷಿ ಹೌದು, ಪಾರ್ಟಿ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಸದರಿ ಅಪೀಲಿನಲ್ಲಿ ನಿಮಗೆ ಅಭಿಲಾಷಾ.ಜಿ.ಡಿ ಬಿನ್ ಲೇಟ್ ದೇವರಾಜು ಗುರುದೇವರಹಳ್ಳಿ, ಸಿ.ಎ.ಕೆರೆ ಹೋಬಳಿ, ಮದ್ದೂರು ವಿಳಾಸಕ್ಕೆ ನೋಟೀಸ್ ಬಂದಿದ್ದು, ನೀವು ವಕೀಲರನ್ನು ನೇಮಕ ಮಾಡಿಕೊಂಡು ಕೇಸು ನಡೆಸಿದ್ದೀರಿ ಎಂದರೆ ಸಾಕ್ಷಿ ಹೌದು ಅವರು ಆ ರೀತಿ ವಿಳಾಸ ಕೊಟ್ಟಿದ್ದರು ಹಾಗಾಗಿ ಆ ರೀತಿ ನಮೂದಾಗಿ ಬಂದಿದೆ ಎಂದು ಉತ್ತರಿಸುತ್ತಾರೆ. ಸದರಿ ಅಪೀಲಿನಲ್ಲಿ ನಿಮ್ಮ ಹೆಸರಿಗೆ ಖಾತ ಆಗಿದ್ದು ರದ್ದಾಗಿ ಎಂಆರ್.ಹೆಚ್.47/2013-14 ರಂತೆ ಖಾತೆ ಭಾಗ್ಯಲಕ್ಷ್ಮಿ ಟಿ.ಸಿ ರವರ ಹೆಸರಿನಲ್ಲಿಯೇ ಖಾತೆ ಇಡಲು ಆದೇಶವಾಗಿರುತ್ತದೆ ಎಂದೆರ ಸಾಕ್ಷಿ ಹೌದು ಅದರ ಜೊತೆಗೆ Indian Succession ಕಾಯಿದೆ ಪ್ರಕಾರ ವಾರಸುದಾರ ದೃಢೀಕರಣ ಪತ್ರ ಪಡೆದು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳುವಂತೆ ಆದೇಶವಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಭಾಗ್ಯಲಕ್ಷ್ಮಿ ಟಿ.ಸಿ ರವರಿಗೆ 1 ನೇ ಎದುರುದಾರರು ಮಾತ್ರ 1 ನೇ ದರ್ಜೆ ಕಾನೂನು ಬದ್ದ ವಾರಸುದಾರರು ಎಂದರೆ ಸಾಕ್ಷಿ ನನ್ನನ್ನು ಚಿಕ್ಕದರಿಂದ ಸಾಕಿದ್ದಾರೆ ಎಂದು ಉತ್ತರಿಸುತ್ತಾರೆ. ನೀವು ಯಾವತ್ತೂ ಕೂಡ ದೇವಗೌಡ ಮತ್ತು ಭಾಗ್ಯಲಕ್ಷ್ಮಿ ಟಿ.ಸಿ ರವರ ಸಾಕು ಮಗಳಲ್ಲ, ಅವರ ಆಸ್ತಿಯನ್ನು ಕಬಳಿಸುವ ದುರುದ್ದೇಶದಿಂದ ಈ ಕೇಸು ಹಾಕಿದ್ದೀರಿ ಎಂದರೆ ಸಾಕ್ಷಿ ಸಂಬಂಧಪಟ್ಟ ದಾಖಲಾತಿಗಳು ನನ್ನ ಬಳಿ ಇದೆ ಎಂದು ಉತ್ತರಿಸುತ್ತಾರೆ.

**ವಿನಂತಿಯ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.